# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **1367** |
| **ಸದಸ್ಯರ ಹೆಸರು** | : | **ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)** |
| **ಉತ್ತರಿಸಬೇಕಾದ ದಿನಾಂಕ** | : | **19.03.2025** |
| **ಉತ್ತರಿಸಬೇಕಾದ ಸಚಿವರು** | : | **ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು.** |

<table>
<tr><th>ಕ್ರ.<br>ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ರಾಜ್ಯದಲ್ಲಿ ಪಶು ಸಂಗೋಪನೆ ಇಲಾಖೆಯಲ್ಲಿ ಖಾಲಿ ಇರುವ ಒಟ್ಟು 9891 ಹುದ್ದೆಗಳನ್ನು ನೇಮಕಾತಿ ಮಾಡಲು ಇಲ್ಲಿಯವರೆಗೆ ಏನು ಕ್ರಮ ವಹಿಸಲಾಗಿದೆ; (ಖಾಲಿ ಇರುವ ಹುದ್ದೆಗಳ ಜಿಲ್ಲಾವಾರು ವಿವರ ನೀಡುವುದು)</td><td rowspan="2">400 ಪಶುವೈದ್ಯಾಧಿಕಾರಿಗಳನ್ನು ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ಭರ್ತಿ ಮಾಡಲು ಸರ್ಕಾರದಿಂದ ಅನುಮತಿಸಿದ್ದು, ಅದರಂತೆ ಕೆ.ಪಿ.ಎಸ್.ಸಿ ಈಗಾಗಲೇ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಸ್ವೀಕರಿಸಿ, ಸದರಿ ನೇಮಕಾತಿಗೆ ಸಂಬಂಧಿಸಿದಂತೆ, ದಿನಾಂಕ:08.04.2025ರಿಂದ ದಿನಾಂಕ:09.04.2025ರವರೆಗೆ ಪರೀಕ್ಷೆಗಳನ್ನು ನಡೆಸಲು ತಾತ್ಕಾಲಿಕ ದಿನಾಂಕಗಳನ್ನು ನಿಗದಿಪಡಿಸಿದೆ.<br><br>ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ಭರ್ತಿ ಮಾಡುವವರೆಗೂ 400 ಪಶುವೈದ್ಯಾಧಿಕಾರಿ ಗಳನ್ನು ಗುತ್ತಿಗೆ ಆಧಾರದಲ್ಲಿ ನೇಮಕಾತಿ ಮಾಡಿಕೊಳ್ಳಲು ಕ್ರಮವಹಿಸಲಾಗಿದ್ದು, 360 ಪಶುವೈದ್ಯರು ಕರ್ತವ್ಯಕ್ಕೆ ಹಾಜರಾಗಿರುತ್ತಾರೆ.<br><br>700 'ಡಿ' ದರ್ಜೆ ನೌಕರರನ್ನು ಹೊರಗುತ್ತಿಗೆ ಆಧಾರದಲ್ಲಿ ನೇಮಕಾತಿ ಮಾಡಿಕೊಳ್ಳುವ ಪ್ರಸ್ತಾವನೆ ಪರಿಶೀಲನೆಯಲ್ಲಿರುತ್ತದೆ.<br><br>ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ನೀಡಿದೆ.</td></tr>
<tr><td>ಆ</td><td>ಪ್ರಾಥಮಿಕ ಹಾಗೂ ಇತರ ಪಶು ಚಿಕಿತ್ಸಾ ಸೇವೆಗಳು ಒಂದು ಅವಶ್ಯಕ ಸೇವೆಗಳಾಗಿದ್ದು ಕನಿಷ್ಠ ಪಕ್ಷ ಖಾಲಿಯಿರುವ ಹುದ್ದೆಗಳ 50% ಪ್ರಾಮುಖ್ಯ ಹುದ್ದೆಗಳನ್ನಾದರೂ ನೇಮಕಾತಿ ಮಾಡುವ ಬಗ್ಗೆ ಇಲಾಖೆಯ ಕ್ರಮಗಳೇನು;</td></tr>
<tr><td>ಇ</td><td>ಪಶುವೈದ್ಯರ ಮತ್ತು ಅವಶ್ಯಕ ಸಿಬ್ಬಂದಿಗಳ ಕೊರತೆಯಿಂದಾಗಿ ಜಾನುವಾರುಗಳ ಚಿಕಿತ್ಸೆಗೆ ಮತ್ತು ಕೆಲವು ಸಾಂಕ್ರಾಮಿಕ ರೋಗಗಳ ಕುರಿತು ಮಾಹಿತಿ ನೀಡಲು ಮತ್ತು ಸಮೀಕ್ಷೆ ಮಾಡಲು ಸಾಧ್ಯವಾಗದ ಕಾರಣ</td><td>ರೈತರ ಜಾನುವಾರುಗಳಿಗೆ ತುರ್ತು ಚಿಕಿತ್ಸೆಯ ಅಗತ್ಯವಿದ್ದಲ್ಲಿ, ರೈತರ ಮನೆಯ ಬಾಗಿಲಿಗೆ ಚಿಕಿತ್ಸೆ ಒದಗಿಸಲು ಅನುವಾಗುವಂತೆ 275 ಸಂಚಾರಿ ಪಶು ಚಿಕಿತ್ಸಾ ಘಟಕ ವಾಹನಗಳನ್ನು ದಿನಾಂಕ:05-08-2023ರಿಂದ ರಾಜ್ಯಾದ್ಯಂತ ಅನುಷ್ಠಾನಗೊಳಿಸಲಾಗಿದೆ.</td></tr>
</table>

...2

| | | |
|---|---|---|
| | ಹಲವಾರು ಜಾನುವಾರುಗಳು ಸಾಕು ಪ್ರಾಣಿಗಳು ಸಾವನ್ನಪ್ಪುತ್ತಿರುವುದರಿಂದ ಅಗತ್ಯ ಅನುಸರಣ ಕ್ರಮ ವಹಿಸಲು ಇಲಾಖೆ ಮುಂದಾಗಿದೆಯೇ; | ಈ ಸಂಚಾರಿ ಚಿಕಿತ್ಸಾ ಘಟಕ ವಾಹನದ ಸಹಾಯವಾಣಿ 1962 ಸಂಖ್ಯೆ 24/7 ಚಾಲ್ತಿಯಲ್ಲಿರುತ್ತದೆ. ಜಾನುವಾರು ಮಾಲೀಕರ ಕರೆಗಳಿಗೆ ಸ್ಪಂದಿಸಿ ಅವಶ್ಯ ತುರ್ತು ಚಿಕಿತ್ಸೆ ಮತ್ತು ಸಾಂಕ್ರಾಮಿಕ ರೋಗಗಳ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.<br><br>ಜಾನುವಾರುಗಳಲ್ಲಿ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಕಾಲು ಬಾಯಿ ಜ್ವರ, ಚರ್ಮಗಂಟು ರೋಗ, ಕಂದು ರೋಗ, ಗಳಲೆ ರೋಗ, ಚಪ್ಪೆ ರೋಗ, ನೆರಡಿ, ಕರುಳು ಬೇನೆ, ನೀಲಿ ನಾಲಿಗೆ ರೋಗ, ಪಿ.ಪಿ.ಆರ್, ಹಂದಿ ಜ್ವರ ಮತ್ತು ಕುರಿ ಸಿಡುಬು ರೋಗಗಳ ವಿರುದ್ಧ ಲಸಿಕಾ ಕಾರ್ಯಕ್ರಮಗಳನ್ನು ನಿಯಮಿತವಾಗಿ ಹಮ್ಮಿಕೊಳ್ಳಲಾಗುತ್ತಿದೆ.<br><br>ತರಬೇತಿ ಹೊಂದಿರುವ ಪಶುಸಖಿಯರು, A-HELP ಕಾರ್ಯಕರ್ತೆಯರು ಹಾಗೂ ಕೃತಕ ಗರ್ಭಧಾರಣಾ ಕಾರ್ಯಕರ್ತರು ಗ್ರಾಮೀಣ ಭಾಗಗಳಲ್ಲಿ ಜಾನುವಾರುಗಳಲ್ಲಿ ಸಾಂಕ್ರಾಮಿಕ ರೋಗಗಳ ಕುರಿತು ಮಾಹಿತಿ ನೀಡುತ್ತಿದ್ದು, ರೈತರಿಗೆ ಮುಂಜಾಗ್ರತೆ ಕ್ರಮಗಳನ್ನು ಕೈಗೊಳ್ಳುವ ಬಗ್ಗೆ ಅರಿವು ಮೂಡಿಸುತ್ತಿರುತ್ತಾರೆ. |
| ಈ | ಪಶು ಸಂಗೋಪನೆ ಇಲಾಖೆಯಲ್ಲಿ ಅಗತ್ಯ ಔಷಧಗಳ ಪೂರೈಕೆಯಿಲ್ಲದೇ ರೇಬೀಸ್, ಮೆದುಳುಜ್ವರ, ಇತ್ಯಾದಿಗಳಿಗೆ ಚಿಕಿತ್ಸಾ ವೆಚ್ಚವನ್ನು ಜಾನುವಾರು ಮಾಲೀಕರೇ ಭರಿಸಬೇಕಾದ ಅನಿವಾರ್ಯತೆ ಸೃಷ್ಟಿಯಾಗಿರುವ ಬಗ್ಗೆ, ಇಲಾಖೆಯ ಸುಧಾರಣಾ ಕ್ರಮಗಳೇನು? | 2024-25ನೇ ಸಾಲಿನಲ್ಲಿ ರೇಬೀಸ್ ರೋಗ ನಿಯಂತ್ರಣ ಮಾಡುವ ಸಂಬಂಧ ರಾಜ್ಯದ ಎಲ್ಲಾ ಪಶುವೈದ್ಯ ಸಂಸ್ಥೆಗಳಲ್ಲಿ ಲಸಿಕೆ ಲಭ್ಯತೆ ಇರುತ್ತದೆ.<br><br>8,50,560 ನಾಯಿಗಳಿಗೆ ಇಲಾಖಾ ವತಿಯಿಂದ (ಫೆಬ್ರುವರಿ-2025ರ ಮಾಹೆಯವರೆಗೆ) ಉಚಿತ ಲಸಿಕೆ ಹಾಕಲಾಗಿರುತ್ತದೆ, 5,241 ಶಾಲಾ ಕಾಲೇಜುಗಳಲ್ಲಿ ರೇಬೀಸ್ ಕಾಯಿಲೆಯ ಬಗ್ಗೆ ವಿದ್ಯಾರ್ಥಿಗಳಿಗೆ ಅರಿವು ಮೂಡಿಸಸಲಾಗಿರುತ್ತದೆ, ಕರಪತ್ರಗಳು, ಬಿತ್ತಿಪತ್ರಗಳು, ಪ್ರದರ್ಶನಗಳು, ದೂರದರ್ಶನದ ಮೂಲಕ ಮುಂಜಾಗ್ರತ ಕ್ರಮಗಳನ್ನು ವಹಿಸುವ ಕುರಿತು ಮಾಹಿತಿ ನೀಡಲಾಗುತ್ತಿದೆ. |

**ಸಂಖ್ಯೆ:ಪಸಂಮೀ 89 ಸಲೆವಿ 2025**

**(ಕೆ. ವೆಂಕಟೇಶ್)**
ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು

# ಅನುಬಂಧ

## ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯಲ್ಲಿ ಜಿಲ್ಲಾವಾರು ಖಾಲಿ ಇರುವ ಹುದ್ದೆಗಳ ವಿವರ

| ಕ್ರ. ಸಂ | ಜಿಲ್ಲೆಗಳ ಹೆಸರು | ಮುಖ್ಯ / ಹಿರಿಯ/ ಪಶು ವೈದ್ಯಾಧಿಕಾರಿ | ಸಹಾಯಕ ಆಡಳಿತ ಅಧಿಕಾರಿ | ಜಾನುವಾರು ಅಭಿವೃದ್ಧಿ ಅಧಿಕಾರಿ | ಜಾನುವಾರು ಅಧಿಕಾರಿ | ಹಿರಿಯ ಪಶುವೈದ್ಯಕೀಯ ಪರೀಕ್ಷಕರು | ಪಶುವೈದ್ಯಕೀಯ ಪರೀಕ್ಷಕರು | ಕಿರಿಯ ಪಶುವೈದ್ಯಕೀಯ ಪರೀಕ್ಷಕರು | ಅಧೀಕ್ಷಕರು | ಪ್ರಥಮ ದರ್ಜೆ ಸಹಾಯಕರು | ದ್ವಿತೀಯ ದರ್ಜೆ ಸಹಾಯಕರು | ಬೆರಳಚ್ಚುಗಾರರು | ಲ್ಯಾಬ್ ಟೆಕ್ನಿಷಿಯನ್ | ಕೃಷಿ ಸಹಾಯಕರು | ಹಿರಿಯ ವಾಹನ ಚಾಲಕರು/ | ಡಿ ದರ್ಜೆ ನೌಕರರು | ಒಟ್ಟು |
|---|---|---|---|---|---|---|---|---|---|---|---|---|---|---|---|---|---|
| 1 | ಬೆಂಗಳೂರು ನಗರ | 3 | 0 | 0 | 1 | 10 | 5 | 4 | 0 | 0 | 0 | 1 | | | 5 | 60 | 89 |
| 2 | ಬೆಂಗಳೂರು ಗ್ರಾಮಾಂತರ | 3 | 0 | 0 | 0 | 39 | 16 | 36 | 1 | 0 | 1 | 1 | | | 6 | 127 | 230 |
| 3 | ರಾಮನಗರ | 20 | 0 | 0 | 4 | 27 | 31 | 38 | 0 | 0 | 0 | 2 | | | 3 | 168 | 293 |
| 4 | ತುಮಕೂರು | 46 | 0 | 4 | 6 | 54 | 36 | 78 | 0 | 0 | 3 | 2 | 1 | 0 | 8 | 348 | 586 |
| 5 | ಚಿತ್ರದುರ್ಗ | 34 | 0 | 5 | 0 | 39 | 25 | 54 | 0 | 0 | 0 | 1 | 1 | 0 | 7 | 179 | 346 |
| 6 | ಕೋಲಾರ | 17 | 0 | 4 | 14 | 33 | 30 | 38 | 0 | 0 | 6 | 2 | 1 | | 5 | 113 | 264 |
| 7 | ಚಿಕ್ಕಬಳ್ಳಾಪುರ | 29 | 0 | 6 | 9 | 31 | 22 | 38 | 0 | 0 | 4 | 1 | 1 | 0 | 7 | 150 | 298 |
| 8 | ದಾವಣಗೆರೆ | 14 | 0 | 1 | 0 | 40 | 30 | 63 | 0 | 0 | 0 | 2 | 1 | 0 | 7 | 211 | 369 |
| 9 | ಶಿವಮೊಗ್ಗ | 36 | 0 | 5 | 2 | 61 | 32 | 59 | 0 | 0 | 0 | 2 | 1 | 0 | 7 | 232 | 437 |
| 10 | ಮೈಸೂರು | 36 | 0 | 3 | 2 | 60 | 2 | 59 | 0 | 0 | 1 | 2 | | | 8 | 228 | 401 |
| 11 | ಮಂಡ್ಯ | 89 | 0 | 0 | 7 | 49 | 8 | 67 | 0 | 0 | 1 | 2 | 1 | 0 | 1 | 293 | 525 |
| 12 | ಚಾಮರಾಜನಗರ | 48 | 0 | 2 | 4 | 33 | 2 | 36 | 0 | 0 | 2 | 0 | 1 | 0 | 5 | 102 | 236 |
| 13 | ಚಿಕ್ಕಮಗಳೂರು | 49 | 0 | 5 | 0 | 25 | 5 | 41 | 0 | 1 | 2 | 2 | 1 | 0 | 8 | 206 | 345 |
| 14 | ಹಾಸನ | 79 | 0 | 5 | 4 | 79 | 1 | 81 | 0 | 0 | 1 | 2 | 1 | 0 | 9 | 297 | 559 |
| 15 | ದಕ್ಷಿಣ ಕನ್ನಡ | 41 | 0 | 1 | 7 | 52 | 19 | 65 | 1 | 0 | 2 | 1 | | | 5 | 67 | 362 |
| 16 | ಉಡುಪಿ | 34 | 0 | 2 | 7 | 37 | 23 | 41 | 0 | 0 | 2 | 0 | 1 | | 4 | 137 | 288 |
| 17 | ಕೊಡಗು | 34 | 0 | 3 | 6 | 29 | 9 | 41 | 1 | 0 | 1 | 1 | | | 0 | 108 | 237 |
| 18 | ಬೆಳಗಾವಿ | 93 | 0 | 1 | 1 | 41 | 67 | 1 | 0 | 0 | 0 | 0 | 1 | 0 | 10 | 356 | 572 |
| 19 | ಉತ್ತರ ಕನ್ನಡ | 106 | 0 | 3 | 4 | 34 | 59 | 38 | 0 | 0 | 5 | 2 | 1 | 0 | 12 | 217 | 481 |
| 20 | ಹಾವೇರಿ | 70 | 1 | 1 | 12 | 55 | 48 | 43 | 0 | 0 | 0 | 2 | 0 | 0 | 8 | 205 | 445 |
| 21 | ಧಾರವಾಡ | 34 | 0 | 1 | 0 | 31 | 22 | 24 | 0 | 0 | 0 | 1 | 0 | 0 | 5 | 132 | 252 |
| 22 | ಗದಗ | 64 | 0 | 1 | 0 | 11 | 43 | 7 | 0 | 0 | 1 | 1 | | | 7 | 131 | 267 |
| 23 | ವಿಜಯಪುರ | 30 | 0 | 0 | 0 | 18 | 17 | 1 | 0 | 0 | 2 | 2 | 1 | | 6 | 175 | 252 |
| 24 | ಬಾಗಲಕೋಟೆ | 55 | 0 | 0 | 0 | 11 | 36 | 3 | 0 | 0 | 1 | 1 | 1 | 0 | 8 | 189 | 305 |
| 25 | ಕಲಬುರಗಿ | 56 | 0 | 5 | 0 | 30 | 13 | 8 | 0 | 0 | 0 | 0 | 0 | 0 | 4 | 281 | 397 |
| 26 | ಯಾದಗಿರಿ | 44 | 0 | 1 | 2 | 24 | 11 | 0 | 0 | 0 | 0 | 0 | 1 | - | 3 | 124 | 209 |
| 27 | ಬಳ್ಳಾರಿ | 43 | 0 | 4 | 6 | 1 | 21 | 12 | 0 | 1 | 0 | 3 | 1 | 1 | 6 | 107 | 206 |
| 28 | ರಾಯಚೂರು | 59 | 0 | 5 | 8 | 14 | 22 | 24 | 0 | 0 | 1 | 0 | 1 | 0 | 6 | 149 | 289 |
| 29 | ಕೊಪ್ಪಳ | 48 | 0 | 1 | 3 | 15 | 26 | 7 | 0 | 1 | 0 | 1 | 1 | 0 | 5 | 111 | 219 |
| 30 | ಬೀದರ್ | 11 | 0 | 4 | 1 | 0 | 11 | 2 | 0 | 0 | 0 | 1 | 1 | 0 | 4 | 168 | 203 |
| 31 | ವಿಜಯನಗರ | 39 | 1 | 6 | 6 | 18 | 34 | 10 | 1 | 1 | 1 | 1 | 0 | 0 | 6 | 119 | 243 |
| | ಒಟ್ಟು | 1364 | 2 | 79 | 116 | 1001 | 726 | 1019 | 4 | 4 | 37 | 39 | 20 | 1 | 185 | 5490 | 10205 |